ಎಂ.ವಿ.ಸಿ ನಂ.22/2024, ಪಿಡಬ್ಲ್ಯೂ: 2

**<u>ಸಾಕ್ಷಿಯನ್ನು ದಿಃ 22-07-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀ ಸವಾಲು ಎದುರುದಾರರ ಪರ ಶ್ರೀಮತಿ ಆರ್.ಕೆ ವಕೀಲರಿಂದಃ-</u>**

ನನಗೆ ಒಟ್ಟು ಮೂರು ಜನ ಮಕ್ಕಳು. ನಮ್ಮ ಕುಟುಂಬದ ಸದಸ್ಯರ ಕುರಿತು ಪಡಿತರ ಚೀಟಿಯನ್ನು ಹಾಜರುಪಡಿಸಿಲ್ಲ. ನನ್ನ ಮಗ ಮೃತ ವಿನಯ್ ರಾಜ್ ಮರಣ ಹೊಂದಿದಾಗ ಆತನಿಗೆ 33 ವರ್ಷ ವಯಸ್ಸಾಗಿತ್ತು. ಈ ಕೇಸಿನ 3 ಮತ್ತು 4 ನೇ ಅರ್ಜಿದಾರರ ವಯಸ್ಸು ಒಂದೇ ಇರುತ್ತದೆ ಎಂದರೆ ಸಾಕ್ಷಿಯು ಅವರಿಬ್ಬರೂ ಅವಳಿ - ಜವಳಿ ಮಕ್ಕಳು ಎನ್ನುತ್ತಾರೆ. 3 ಮತ್ತು 4 ನೇ ಅರ್ಜಿದಾರರು ಇಬ್ಬರೂ ಬಿ.ಎ ಪದವಿ ಪಡೆದುಕೊಂಡಿದ್ದು, ಇಬ್ಬರೂ ಕೆಲಸಕ್ಕೆ ಹೋಗುತ್ತಾರೆ. ನನ್ನ ಗಂಡ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದು ಅವರಿಗೆ ಅಪಘಾತ ಉಂಟಾಗಿ ಮನೆಯಲ್ಲಿಯೇ ಇದ್ದಾರೆ.

ನನ್ನ ಮಗ ಮೃತ ವಿನಯ್ ರಾಜ್ ಬೆಂಗಳೂರಿನಲ್ಲಿ ಒಂದು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದನು. ಆತನಿಗೆ ತಿಂಗಳಿಗೆ ರೂ.20,000/- ರಿಂದ ರೂ.25,000/- ಆಧಾಯ ಬರುತಿತ್ತು. ಆದರೆ ಈ ಬಗ್ಗೆ ತೋರಿಸುವ ಕುರಿತು ಯಾವುದೇ ದಾಖಲೆಗಳು ನಮ್ಮ ಬಳಿ ಇರುವುದಿಲ್ಲ. ನನ್ನ ಮಗನ ಮಾಸಿಕ ವೇತನವನ್ನು ಯಾವ ರೂಪದಲ್ಲಿ ಪಾವತಿಸುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ದಿನಾಂಕ 14.10.2023 ರಂದು ನನ್ನ ಮಗ ಮೃತ ವಿನಯ್ ರಾಜ್ ಆನಂದಗಿರಿ ಯಿಂದ ಬಂಗಾರಪೇಟೆಗೆ ಮೋಟಾರ್ ಸೈಕಲ್‌ನಲ್ಲಿ ಬರುತ್ತಿದ್ದರು. ನನ್ನ ಮಗ ಆನಂದಗಿರಿಗೂ ಸಹ ಅದೇ ಬೈಕಿನಲ್ಲಿ ಹೋಗಿದ್ದರು. ಸದರಿ ಬೈಕ್ ನ್ನು ನನ್ನ ಮಗ ಮೃತ ವಿನಯ್ ರಾಜ್ ಗೆ ಸೇರಿದ್ದಾಗಿತ್ತು. ಸದರಿ ಮೋಟಾರ್ ಸೈಕಲ್ ಡಿಯೋ ವಾಹನವಾಗಿರುತ್ತದೆ. ನನ್ನ ಮಗ ಮೃತ ವಿನಯ್ ರಾಜ್ ಗೆ ಮೋಟಾರ್ ಸೈಕಲ್ ನ್ನು ಚಾಲನೆ ಮಾಡಲು ಚಾಲನ ಪರವಾನಗಿ ಇದ್ದು ಅದನ್ನು ಆತ ಬೈಕಿನಲ್ಲಿಯೇ ಇಟ್ಟುಕೊಂಡಿದ್ದನು. ಆದರೆ ಅದು ಏನಾಯಿತು ಎಂದು ನನಗೆ ಗೊತ್ತಿಲ್ಲ. ನನ್ನ ಮಗ ಮೃತ ವಿನಯ್ ರಾಜ್ ಗೆ ಮೋಟಾರ್ ಸೈಕಲ್ ನ್ನು ಚಾಲನೆ ಮಾಡಲು ಚಾಲನ ಪರವಾನಗಿ ಮತ್ತು ಸದರಿ ಮೋಟಾರ್ ಸೈಕಲ್ ಗೆ ವಿಮಾ ಪಾಲಿಸಿ ಇರಲಿಲ್ಲ ಎಂದರೆ ಸರಿಯಲ್ಲ. ನನಗೆ ಈಗ ತೋರಿಸುತ್ತಿರುವ ವಿಮಾ ಪಾಲಿಸಿಯ ಜೆರಾಕ್ಸ್ ಪ್ರತಿಯು ನನ್ನ ಮಗ ಚಾಲನೆ

ಮಾಡುತ್ತಿದ್ದ ಮೋಟಾರ್ ಸೈಕಲ್ ಸಂಖ್ಯೆ ಕೆಎ 08 ಎಸ್ 3314 ಗೆ ಸಂಬಂಧಿಸಿದ್ದಾಗಿದೆ ಎಂದರೆ ಸರಿ. ಸದರಿ ದಾಖಲೆಯು ಜೆರಾಕ್ಸ್ ಪ್ರತಿಯಾಗಿರುವುದರಿಂದ ಅದನ್ನು ನಿಶಾನಿಸಿರುವುದಿಲ್ಲ. ಸದರಿ ವಿಮಾ ಪಾಲಿಸಿಯು ದಿನಾಂಕ 13.01.2018 ರಿಂದ 12.01.2019 ವರೆಗೆ ಮಾತ್ರ ಚಾಲ್ತಿಯಲ್ಲಿತ್ತು ಎಂದರೆ ಸರಿ. ನನ್ನ ಮಗನಿಗೆ ಚಾಲನ ಪರವಾನಗಿ ಇರಲಿಲ್ಲವಾದ್ದರಿಂದ ಅದನ್ನು ನಾವು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನನ್ನ ಮಗನ ಜೊತೆ ಬೈಕಿನಲ್ಲಿ ಹೋಗುತ್ತಿದ್ದ ರವಿತೇಜಾ ಎಂಬುವವರು ಅಪಘಾತದ ಬಗ್ಗೆ ಪೊಲೀಸರಿಗೆ ದೂರು ಕೊಟ್ಟಿದ್ದರು. ಅಪಘಾತವಾದ ದಿನವೇ ಆತ ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದಾನೆ ಎಂದರೆ ಸರಿ. ಸದರಿ ನಿಪಿ-2 ದೂರಿನಲ್ಲಿ ಬೈಕಿನಲ್ಲಿ ಬೂದಿಕೋಟೆಯ ಸರ್ಕಲ್ ಬಳಿ ಇರುವ ಆಯಿಲ್ ಅಂಗಡಿಯ ಬಳಿ ಬಂಗಾರಪೇಟೆ ಕಡೆಗೆ ಬರುತ್ತಿದ್ದಾಗ ಬಂಗಾರಪೇಟೆಯಿಂದ ಬೂದಿಕೋಟೆ ಕಡೆಗೆ ಹೋಗಲು ಯಾವುದೇ ಒಂದು ಆಟೋ ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ವಿನಯ್ ರಾಜ್ ರವರು ಚಲಾಯಿಸುತ್ತಿದ್ದ ವಾಹನಕ್ಕೆ ಡಿಕ್ಕಿ ಪಡಿಸಿದ್ದು- ಎಂಬುದಾಗಿ ನಮೂದು ಇರುತ್ತದೆ ಎಂದರೆ ಸಾಕ್ಷಿಯು ಅದು ಸುಳ್ಳು ಎಂದು ನುಡಿಯುತ್ತಾರೆ. ಆದರೆ ನಿಪಿ 2 ದೂರಿನಲ್ಲಿ ಸದರಿ ಆಟೋ ರಿಕ್ಷಾದ ನೋಂದಣಿ ಸಂಖ್ಯೆ ಮತ್ತು ಆ ಸಮಯದಲ್ಲಿ ಆಟೋ ರಿಕ್ಷಾವನ್ನು ಚಾಲನೆ ಮಾಡುತ್ತಿದ್ದ ಆಟೋ ರಿಕ್ಷಾ ಚಾಲಕ ಯಾರು ಇದ್ದರು ಎಂಬ ಬಗ್ಗೆ ನಮೂದು ಮಾಡಿಲ್ಲ ಎಂದರೆ ಇರಬಹುದು. ಅದೇ ರೀತಿ ನಿಪಿ 2 ದೂರಿನಲ್ಲಿ ನಾವು ವಾಹನ ಸಮೇತವಾಗಿ ಕೆಳಗೆ ಬಿದ್ದಾಗ ಬಂಗಾರಪೇಟೆ ಕಡೆಯಿಂದ ಬೂದಿಕೋಟೆ ಕಡೆಗೆ ಹೋಗಲು ಯಾವುದೋ ಒಂದು ಕಾರಿನ ಚಾಲಕ ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ರಸ್ತೆಯಲ್ಲಿ ಬಿದ್ದಿದ್ದ ವಿನಯ್ ರಾಜ್ ರವರ ದ್ವಿಚಕ್ರ ವಾಹನಕ್ಕೆ ಕಾರಿನ ಚಾಲಕ ಡಿಕ್ಕಿ ಪಡಿಸಿ ವಿನಯ್ ರಾಜ್ ರವರ ಮೇಲೆ ಕಾರ್ ಹತ್ತಿಸಿಕೊಂಡು ಆಟೋ ಮತ್ತು ಕಾರು ಎರಡು ಸ್ಥಳದಿಂದ ಪರಾರಿಯಾಗಿರುತ್ತಾರೆ - ಎಂಬುದಾಗಿ ನಮೂದು ಇದ್ದು ಸದರಿ ಕಾರಿನ ನೋಂದಣಿ ಸಂಖ್ಯೆ ಮತ್ತು ಕಾರಿನ ಚಾಲಕನ ಹೆಸರನ್ನು ಸದರಿ ದೂರಿನಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಸದರಿ ಕಾರಿನ ಪೊಲೀಸರೇ ಪತ್ತೇಹಚ್ಚಿ ಪೊಲೀಸ್ ಠಾಣೆಗೆ ತೆಗೆದುಕೊಂಡು ಬಂದ್ದಿದರು. ಸದರಿ ಕೆಎ 53 - ಸಿ 6712 ಕಾರು ಸದರಿ ಅಪಘಾತ ಮಾಡದೇ

ಇದ್ದರೂ ಸಹ ಪೊಲೀಸರ ಜೊತೆ ಶಾಮೀಲಾಗಿ ಸದರಿ ಕಾರನ್ನು ಈ ಕೇಸಿನಲ್ಲಿ ಸಿಲುಕಿಸಿದ್ದೇವೆ ಎಂದರೆ ಸರಿಯಲ್ಲ. ಸಂಬಂಧಪಟ್ಟ ಪೊಲೀಸರು ಸದರಿ ಆಟೋ ರಿಕ್ಷಾ ಚಾಲಕ ಮತ್ತು ಕಾರಿನ ಚಾಲಕ ಇಬ್ಬರ ವಿರುದ್ಧ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಕಾರನ್ನು ಚೇತನ್ ಎಂಬ ಹುಡುಗ ಚಾಲನೆ ಮಾಡುತ್ತಿದ್ದನು ಎಂದು ಗೊತ್ತಾಯಿತು. ನಿಪಿ-10 ದೋಷರೋಪಣಾ ಪಟ್ಟಿಯ ಪ್ರಕಾರ ಅಪಘಾತದ ಸಮಯದಲ್ಲಿ ಚಂದನ್ ಎಂಬಾತ ಸದರಿ ಕಾರನ್ನು ಚಾಲನೆ ಮಾಡುತ್ತಿದ್ದು ಚೇತನ್ ಅಲ್ಲ ಎಂದರೆ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಅಪಘಾತಕ್ಕೂ ಮತ್ತು ಕಾರಿನ ಸಂಖ್ಯೆ ಕೆಎ-53-ಸಿ-6712 ಹಾಗೂ ಎದುರುದಾರ ಚೇತನ್ ಗೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸದರಿ ಆಟೋ ರಿಕ್ಷಾ ಚಾಲಕನ ಅತಿವೇಗ ಮತ್ತು ಅಜಾಗರೂಕತೆಯಿಂದ ಅಪಘಾತ ಉಂಟಾಗಿರುವುದರಿಂದ ಸದರಿ ಆಟೋ ರಿಕ್ಷಾ ಮತ್ತು ಅದರ ಚಾಲಕನನ್ನು ಈ ಕೇಸಿನಲ್ಲಿ ಸೇರಿಸಬೇಕಾಗುತ್ತದೆ ಎಂದರೆ ಸರಿಯಲ್ಲ.

ನಿಪಿ-9 ರಂತೆ ನನ್ನ ಗಂಡ ತಿಪ್ಪಣ್ಣ ಅಲಿಯಾಸ್ ತಿಪ್ಪರಾಜ್ ರವರು ಪೊಲೀಸರು ಮುಂದೆ ಕೊಟ್ಟಿರುವ ಹೇಳಿಕೆಯಲ್ಲಿ ಸದರಿ ಕಾರು ಮತ್ತು ಆಟೋ ರಿಕ್ಷಾದ ನೋಂದಣಿ ಸಂಖ್ಯೆಯನ್ನು ಹೇಳಿರುವುದಿಲ್ಲ ಎಂದರೆ ಸಾಕ್ಷಿಯು ಆ ಸಮಯದಲ್ಲಿ ಗೊತ್ತಿರಲಿಲ್ಲ ಎಂದು ಹೇಳುತ್ತಾರೆ. ಅರ್ಜಿದಾರರು 1, 3 ಮತ್ತು 4 ರವರು ಸಂಪಾದನೆ ಮಾಡುತ್ತಿದ್ದು ನನ್ನ ಯೋಗಕ್ಷೇಮ ಮತ್ತು ಕುಟುಂಬದ ಖರ್ಚು ವೆಚ್ಚಗಳನ್ನು ಭರಿಸುತ್ತಿದ್ದು ನನ್ನ ಮೃತ ಮಗ ವಿನಯ್ ರಾಜ್ ರವರ ಸಂಪಾದನೆಯ ಮೇಲೆ ನಾವು ಯಾರು ಸಹ ಅವಲಂಬಿತರಾಗಿರಲಿಲ್ಲ ಎಂದರೆ ಸರಿಯಲ್ಲ. ಶವ ಸಂಸ್ಕಾರಕ್ಕೆ ರೂ.1,00,000/- ಖರ್ಚಾಗಿದೆ ಎಂಬುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ಬದುಕಿದ್ದಾಗ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು ತಿಂಗಳಿಗೆ ರೂ.25,000/- ವರಮಾನ ಬರುತ್ತಿದ್ದು ಆತ ಒಂದುವೇಳೆ ಬದುಕಿದ್ದರೆ ತಿಂಗಳಿಗೆ ರೂ.50,000/- ಹೆಚ್ಚಾಗಿ ಸಂಪಾದನೆ ಮಾಡುತ್ತಿದ್ದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೃತ ಮಗ ವಿನಯ್ ರಾಜ್

ಯಾವುದೇ ಉದ್ಯೋಗ ಮಾಡುತ್ತಿರಲಿಲ್ಲ ಮತ್ತು ತಿಂಗಳಿಗೆ ರೂ.25,000/- ವರಮಾನ ಸಹ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ನ್ಯಾಯಾಲಯದ ಮುಂದೆ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇರುವುದಿಲ್ಲ.

**<u>ಸಾಕ್ಷಿಯ ಹೇಳಿಕೆಯ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.</u>**

ಓ ಹೇ ಕೇ ಸರಿ ಇದೆ,

**(ಶಿವಕುಮಾರ ಬಿ)**
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕೋಲಾರ ಕೆ.ಜಿ.ಎಫ್(ಪೀಠ)**